238 (399): ಶ್ರೀ ಪಾಟೀಲ್ ಬಿ.ಆರ್. (ಅಳಂದ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ರಾಜ್ಯದಲ್ಲಿ ರಸ್ತೆ ನಿರ್ವಹಣೆ ಕೆಲಸ ತೃಪ್ತಿದಾಯಕವಾಗಿ ನಡೆಯುತ್ತಿದೆಯೇ;

ಆ. ಗುತ್ತಿಗೆದಾರನ ನಿರಾಸಕ್ತ ಮತ್ತು ನಿಷ್ಕ್ರಿಯತೆಯಿಂದ ಅದರ ಕೆಲಸದ ರಾಜ್ಯ ಹೆದ್ದಾರಿ ನಂ.10ರ ನಿರ್ವಹಣೆ ಕಳಪೆ ಮಟ್ಟದ್ದಾಗಿದ್ದು ನಿಧಾನಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಈ ರಸ್ತೆ ಸಂಚಾರಕ್ಕೆ ಸಾಧ್ಯವಾಗುತ್ತಿಲ್ಲವೆಂಬುದು ಸರ್ಕಾರಕ್ಕೆ ಗೊತ್ತಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕ್ರಮಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ. ಮೂರು ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣೆ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಒಟ್ಟು 14500 ಕಿಮೀ. ರಾಜ್ಯ ಹೆದ್ದಾರಿಯನ್ನು 42 ಪ್ಯಾಕೆಜ್‌ಗಳಲ್ಲಿ ನಿರ್ವಹಣೆಗಾಗಿ ತೆಗೆದುಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ. ಬಂದಿದೆ.

ಇ. ಪ್ರಸ್ತುತ ಸಾಲಿನಲ್ಲಿ ಬಿದ್ದ ಭಾರಿ ಮಳೆಯಿಂದ ರಸ್ತೆಯು ಹಾಳಾಗಿದ್ದು, ಇದನ್ನು ಗುಲ್ಬರ್ಗಾ ವಿಭಾಗದ ಪ್ಯಾಕೇಜ್–2ರ ರಾಜ್ಯ ಹೆದ್ದಾರಿ ನಿರ್ವಹಣೆ ಯೋಜನೆಯಡಿಯಲ್ಲಿ ನಿರ್ವಹಣೆಗಾಗಿ ತೆಗೆದುಕೊಂಡಿದೆ. ಸದರಿ ಕಾಮಗಾರಿಗಳು ಪ್ರಗತಿಯಲ್ಲಿವೆ.

239 (400): ಶ್ರೀ ಪಾಟೀಲ್ ಬಿ.ಆರ್. (ಅಳಂದ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಲೋಕೋಪಯೋಗಿ ಇಲಾಖೆ ವತಿಯಿಂದ ರಸ್ತೆ ನಿರ್ವಹಣೆ ಮತ್ತು ದುರಸ್ತಿ ಮಾಡಲು ಮುಂದುವರಿದ ಮತ್ತು ಹಿಂದುಳಿದ ಪ್ರದೇಶಕ್ಕೆ ಸಮಾನಾಂತರವಾಗಿ 3 ಕಿಲೋಮೀಟರ್‌ಗೆ 3 ಲಕ್ಷ ರೂಪಾಯಿ ಒದಗಿಸಿರುವುದು ಸರಿಯೇ;

ಆ. ಹಿಂದುಳಿದ ಪ್ರದೇಶದ ರಸ್ತೆಗಳು ಹದಗೆಟ್ಟು ಸಂಚಾರಕ್ಕೆ ಅಸಾಧ್ಯವಾಗುವ ಮಟ್ಟಿಗೆ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ಹಿಂದುಳಿದ ಪ್ರದೇಶವಾದ ಹೈದ್ರಾಬಾದ್–ಕರ್ನಾಟಕಕ್ಕೆ 1 ಕಿಲೋಮೀಟ್‌ರ್‌ಗೆ 6 ಲಕ್ಷ ರೂಪಾಯಿ ಕೂಡಲು ಸಾಧ್ಯವೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ. ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಾಜ್ಯ ಹೆದ್ದಾರಿಗಳ ಮೂರು ವರ್ಷಗಳ ನಿರ್ವಹಣೆಗಾಗಿ ಪ್ರತಿ ಕಿಲೋಮೀಟರ್‌ಗೆ ಅನುದಾನದ ಲಭ್ಯತೆಯಂತೆ ನಿಗಧಿಸಲಾಗಿದ್ದು, ಇದರಲ್ಲಿ ಮುಂದುವರೆದ ಅಥವಾ ಹಿಂದುಳಿದ ಪ್ರದೇಶ ಎಂಬುದಾಗಿ ಪ್ರತ್ಯೇಕಿಸಿರುವುದಿಲ್ಲ.

ಆ. ಬಂದಿದೆ.

ಇ. ಇಲ್ಲ.

240 (401) ಶ್ರೀ ಪಾಟೀಲ್ ಬಿ.ಆರ್ (ಆಳಂದ) ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಆಳಂದ ತಾಲ್ಲೂಕಿನಲ್ಲಿ ಗುಲ್ಬರ್ಗಾದಿಂದ ನಿಂಬರ್ಗಾಮಾಡ್ಯಾಳ–ನಿಂಬಾಳ ಮಾರ್ಗವಾಗಿ ಮಹಾರಾಷ್ಟ್ರ ಗಡಿ ದುದನಿ ಪಟ್ಟಣಕ್ಕೆ ಯೋಗ್ಯ ಸಂಪರ್ಕ ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಗುಲ್ಬರ್ಗಾದಿಂದ ಮಾಡ್ಯಾಳವರೆಗೆ ಪಕ್ಕಾ ರಸ್ತೆಯಿದ್ದು ಮಾಡ್ಯಾಳದಿಂದ ದುದನಿ ಬಾರ್ಡರ್‌ವರೆಗೆ ರಸ್ತೆ ಸರಿ ಇಲ್ಲದ ಕಾರಣ ಇದನ್ನು ಅಂತರ ರಾಜ್ಯ ರಸ್ತೆ ಸಂಪರ್ಕ ಯೋಜನೆಯಲ್ಲಿ ಕೈಗೆತ್ತಿಕೊಳ್ಳುವ ವಿಚಾರ ಸರ್ಕಾರದ ಮುಂದಿದೆಯೇ;

ಇ. ಹಾಗಿದ್ದಲ್ಲಿ, ಇದನ್ನು ಬೇರೆ ಯೋಜನೆಯಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರ ಪರಿಗಣಿಸುವುದೇ (ತಿಳಿಸುವುದು)?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ. ಬಂದಿರುತ್ತದೆ.

ಆ. ಸದ್ಯಕ್ಕೆ ಈ ಪ್ರಸ್ತಾವನೆ ಇರುವುದಿಲ್ಲ.

ಇ. ಈ ರಸ್ತೆಯನ್ನು ಮುಖ್ಯಮಂತ್ರಿಗಳ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಲೆಕ್ಕ ಶೀರ್ಷಿಕೆ 3054 ರಡಿಯಲ್ಲಿ ಗುಂಡಿಮುಚ್ಚುವ ಕಾರ್ಯಕ್ರಮವನ್ನು ಕೈಗೊಳ್ಳಲಾಗಿರುತ್ತದೆ. ಇದಲ್ಲದೆ ಈ ರಸ್ತೆಯ ಸಮಗ್ರ ಸುಧಾರಣೆಯನ್ನು ಅನುದಾನದ ಲಭ್ಯತೆಯನ್ನು ಆಧರಿಸಿ ಯಾವುದಾದರೂ ಯೋಜನೆಯಲ್ಲಿ ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುವುದು.